

# ಚಂದ ಕಾಣಾಕ..

ಬ್ಯೂಟಿ ಬಾಮ್ ಹೆಸರಿನಲ್ಲಿ ಬರುತ್ತಿರುವ ಬಿಬಿ ಕ್ರೀಂ ಎಲ್ಲ ಸಮಸ್ಯೆಗಳಿಗೂ ಪರಿಹಾರ ಎಂಬುದು ಕಂಪೆನಿಗಳ ಪ್ರಚಾರ ತಂತ್ರ. ಆದರೆ ವಿಭಿನ್ನ ಬಗೆಯ ಚರ್ಮಗಳ ಅಗತ್ಯಗಳೂ ಬೇರೆ ಬೇರೆ ಎಂಬುದು ಚರ್ಮತಜ್ಞರ ವಾದ. ಆದರೆ ಚಂದಗಾಣಿಸುವುದು ಏನು ಎಂಬುದೇ ಮೂಲ ಪ್ರಶ್ನೆ..

■ ಎಸ್. ರಶ್ಮಿ




‘ಚಂದಗೆ ಕಾಣಾಕ ಎಷ್ಟು ಕ್ರೀಮ್ ಹಚ್ಕೊಬೇಕು?’ ಅಂತ ಮಗಳು ಕೇಳ್ತಿದ್ದಳು. ರಾತ್ರಿಗೆ ನೈಟ್ ಕ್ರೀಮ್, ಫೌಂಡೇಶನ್ ಕ್ರೀಮ್, ಸನ್‌ಸ್ಕ್ರೀಮ್, ಮಾಯಿಶ್ಚರೈಸರ್... ಮತ್ತೇನು... ಮತ್ತೆಷ್ಟು? ಟಿ.ವಿ. ಜಾಹೀರಾತು ನೋಡ್ಕೊಂತ ಕೇಳಿದ ಹುಡುಗಿಗೆ ಉತ್ತರ ಹೇಳೂದು ಸುಲಭ ಇರಲಿಲ್ಲ.

ಹೌದು. ‘ಚಂದ’ ಎನ್ನುವುದರ ಅರ್ಥವೇ ಬದಲಾಗಿದೆ. ಆರೋಗ್ಯ ಪೂರ್ಣವಾಗಿರುವುದು, ಸಹಜವಾಗಿರುವುದೇ ಸೌಂದರ್ಯದ ಪರಿಭಾಷೆಯಾಗಿತ್ತು. ಆದರೆ ಇದೀಗ ಮುಖದ ಮೇಲೊಂದು ಮುಖವಾಡದ ನಿರ್ಮಾಣ ಮಾಡುವುದೇ ಸೌಂದರ್ಯ ಎನಿಸಿಕೊಳ್ಳುತ್ತಿದೆ.

ಆದರೆ ಇದೆಲ್ಲವನ್ನೂ ಒಂದರಲ್ಲಿಯೇ ಅಳವಡಿಸುವ ಪ್ರಯತ್ನಗಳು ಪ್ರಸಾಧನ ಕ್ಷೇತ್ರಗಳಲ್ಲಿಯೂ ನಡೆಯುತ್ತಲೇ ಇದ್ದವು. ಇದೀಗ ‘ಬಿ.ಬಿ’ ಹೆಸರಿನ ಕ್ರೀಮ್ ಒಂದನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಲಾಗಿದೆ. ಇದೊಂದೇ ಕ್ರೀಮ್ ಸಾಕು. ತ್ವಚೆಯ ಎಲ್ಲ ಸಮಸ್ಯೆಗಳಿಗೂ ಪರಿಹಾರ ಒದಗಿಸುತ್ತದೆ ಎನ್ನುವುದು ಕಂಪೆನಿಯ ಪ್ರಚಾರವಾಗಿದೆ.

ಬ್ಯೂಟಿ ಬಾಮ್ ಹೆಸರಿನಲ್ಲಿ ಈ ಬಿಬಿ ಕ್ರೀಂ ಮಾರುಕಟ್ಟೆಗೆ ಮೊದಲು ಬಂದದ್ದು 1950ರ ದಶಕದಲ್ಲಿ. 60ರ ದಶಕ ಎಂದೂ ಹೇಳಲಾಗುತ್ತದೆ. ಆದರೆ ಬೆಲ್ಮಿಶ್ ಬಾಮ್, ಬೆಲ್ಮಿಶ್ ಬೇಸ್ ಎಂಬ ಹೆಸರಿನಲ್ಲಿ ಇದು ಖ್ಯಾತಿ ಪಡೆಯುತ್ತ ಹೋಯಿತು. ಬೆಲ್ಮಿಶ್ ಹೆಸರಿನಲ್ಲಿ ಪೇಟೆಂಟ್ ಪಡೆದಿರುವುದರಿಂದ ಇಂಥ ಹೆಸರುಗಳು ಚಾಲ್ತಿಗೆ ಬಂದವು.

ಜರ್ಮನ್‌ನ ಚರ್ಮ ತಜ್ಞ ಡಾ. ಕ್ರಿಸ್ಟೀನ್ ಮೊದಲ ಸಲ ಮಾರುಕಟ್ಟೆಗೆ ಪರಿಚಯಿಸಿದ್ದರು. ಚರ್ಮದ ಬಣ್ಣವನ್ನು ತಿಳಿಗೊಳಿಸುವ, ವಯಸ್ಸನ್ನು ಮರೆಮಾಚುವ ಅಥವಾ ಕಡಿಮೆಗೊಳಿಸುವ ಶಕ್ತಿ ಇದಕ್ಕಿದೆ ಎನ್ನಲಾಗಿತ್ತು.

ನಂತರ ಜರ್ಮನ್ ನಂತರ ಕೊರಿಯಾದಲ್ಲಿ ಈ ಬ್ಯೂಟಿ ಬಾಮ್ ಹೆಸರುವಾಸಿಯಾಗತೊಡಗಿತು. ‘ದಿ ಸೀಕ್ರೆಟ್ ಆಫ್ ಕೊರಿಯನ್ ಆಕ್ಟ್ರೆಸ್’ ಎಂಬ ಸುದೀರ್ಘ ಹೆಸರಿನೊಂದಿಗೆ ಈ ಕ್ರೀಮ್ ಬಿಡುಗಡೆಯಾಗಿತ್ತು. ಕೊರಿಯನ್ ನಟಿಯ ರಹಸ್ಯಗಳು ಎಂಬ ಹೆಸರು ಅದೆಷ್ಟು ಜನರನ್ನು ಸೆಳೆಯಿತೋ... ಸದ್ಯಕ್ಕೆ ಪೂರ್ವ ಹಾಗೂ ದಕ್ಷಿಣ ಏಷ್ಯಾದಲ್ಲಿ ಈ ಬ್ಯೂಟಿ ಬಾಮ್ ಹೆಚ್ಚು ಹೆಚ್ಚು ಜನಪ್ರಿಯಗೊಳ್ಳುತ್ತಿದೆ.

ಆದರೆ ಸರ್ವ ಸಮಸ್ಯೆಗಳಿಗೂ ಏಕೈಕ ರಾಮಬಾಣ ಎಂಬ ಪ್ರಚಾರದಲ್ಲಿ ಅದೆಷ್ಟು ಹುರುಳಿದೆ? ಎನ್ನುವುದೇ ಸದ್ಯದ ಪ್ರಶ್ನೆಯಾಗಿದೆ.

ಚರ್ಮ ತಜ್ಞರ ಪ್ರಕಾರ ಒಂದೇ ಒಂದು ಕ್ರೀಮ್ ಎಲ್ಲ ಬಗೆಯ ಚರ್ಮಗಳಿಗೆ ಹೊಂದುವುದು ಅಸಾಧ್ಯದ ಮಾತಾಗಿದೆ. ನಮ್ಮ ಚರ್ಮ ಹೇಗೆ ಭಿನ್ನವಾಗಿದೆಯೋ ಹಾಗೆಯೇ ಅದರ ಅಗತ್ಯಗಳೂ ಭಿನ್ನವಾಗಿವೆ. ಒಂದು ಕ್ರೀಂ ಈ ಎಲ್ಲ ಅಗತ್ಯಗಳನ್ನೂ ಪೂರೈಸುವುದು ಕಷ್ಟ ಸಾಧ್ಯವೇ ಆಗಿದೆ ಎನ್ನುವುದು ಹಲವು ಚರ್ಮ ತಜ್ಞರ ಅನಿಸಿಕೆಯಾಗಿದೆ.

ಅರಿಸಿನ ಚಂದನ ಹಾಗೂ ಹಾಲಿನ ಲೇಪನವೊಂದಿದ್ದರೆ ಯಾವುದೇ ಲೇಪನಗಳ ಅಗತ್ಯ ಇರುವುದಿಲ್ಲ. ಚರ್ಮ ಕಾಂತಿಯುತವಾಗಿ ಕಾಣಲು ಹೇರಳವಾದ ನೀರು ಕುಡಿಯಬೇಕು. ಆರೋಗ್ಯವಂತ ಮನಃಸ್ಥಿತಿಯೂ ನಮ್ಮ ಮುಖದ ಕಾಂತಿಯ ಮೇಲೆ ಪ್ರಭಾವ ಬೀರುತ್ತದೆ ಎಂಬುದು ಬಹುತೇಕ ಜನರಿಗೆ ಗೊತ್ತೇ ಇಲ್ಲ.

ನೀರು ಕುಡಿಯದೇ, ಮಾದಕ ಪೇಯಗಳನ್ನು ಸೇವಿಸುತ್ತ, ಒತ್ತಡದ ಬದುಕಿನಲ್ಲಿ ನಿದ್ರಾಹೀನತೆಯಿಂದ ಬಳಲುವವರೆಲ್ಲ ಮಣಗಟ್ಟಲೆ ಕ್ರೀಮುಗಳನ್ನು ಹೇರಿಕೊಂಡರೂ ಚಂದಗಾಣುವುದು ಅಸಾಧ್ಯದ ಮಾತೇ ಆಗಿದೆ.

ಮುಖದ ಕಾಂತಿ ಹೆಚ್ಚಲು ಚರ್ಮದ ಆರೈಕೆಯ ಅಗತ್ಯವಿದೆ. ಅದು ಮೂವತ್ತು ವರ್ಷಗಳ ನಂತರ ನಿಗದಿತ ಸಮಯದ ಫೇಷಿಯಲ್‌ಗಳಿಂದ, ಮಸಾಜ್‌ಗಳಿಂದಲೂ ಮಾಡಬಹುದು. ಹೇರಳವಾದ ನೀರು ಕುಡಿಯುವ, ಆರಾಮದಾಯಕ ನಿದ್ದೆ ಮಾಡುವ, ಸಮಾಧಾನದಿಂದಿರುವ ಮನಃಸ್ಥಿತಿ ಇದ್ದರೆ, ಸಹಜ ಸೌಂದರ್ಯ ತಾನಾಗಿಯೇ ಒಲಿಯುತ್ತದೆ. ಅದು ಕೇವಲ ಹೊಳಪನ್ನಲ್ಲ ಕಾಂತಿಯನ್ನು ನೀಡುತ್ತದೆ. ಇಂಥ ಕಾಂತಿ ಯಾವ ಬ್ಯೂಟಿ ಬಾಮ್‌ಗಳೂ ನೀಡುವುದು ಅಸಾಧ್ಯ ಎನ್ನುವುದಂತೂ ನಿಜ.

‘ಚಂದಗೆ ಕಾಣಾಕ ಕ್ರೀಮ್ ಅಲ್ಲ, ಚಂದಗೆ ಇರೂದು ಕಲೀಬೇಕು’ ಎಂದು ಮಗಳಿಗೆ ಹೇಳುತ್ತ, ಈ ಚರ್ಚೆಗೆ ಮುಕ್ತಾಯ ಹಾಡಿದ್ದೆ. ■